**ಎಂವಿಸಿ ನಂ. 61/2020**
**ಪಿ. ಡಬ್ಲ್ಯೂ.1**

ಇಂದು ದಿನಾಂಕ 24-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನಾನು ಕೆನರಾ ಗ್ಯಾರೇಜನಲ್ಲಿ ಕೆಲಸ ಮಾಡುತ್ತೇನೆ. ಅಲ್ಲಿ ನಾವು 4 ಜನರು ಕೆಲಸ ಮಾಡುತ್ತೇವೆ. ನನ್ನ ಉದ್ಯೋಗ ಮತ್ತು ವೇತನವನ್ನು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲಾ. ಸದರೀ ಗ್ಯಾರೇಜನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹಾಗೂ ಮಾಸಿಕ ರೂ. 15,000/- ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ನಾನು 1983 ರಲ್ಲಿ ಜನಿಸಿರುತ್ತೇನೆ. ಆ ಬಗ್ಗೆ ನನ್ನ ಆಧಾರ ಕಾರ್ಡನ್ನು ಹಾಜರುಪಡಿಸಿದ್ದೇನೆ.

ಅಪಘಾತ ಬೇಲೂರಿನ ರಿಲಾಯನ್ಸ ಪಂಪ ಹಿಂದುಗಡೆ ಆಗಿರುತ್ತದೆ. ಟಿಪ್ಪರ ಲಾರಿಯು ಸದರೀ ಪಂಪನ ಹಿಂದುಗಡೆ ನಿಂತಿತ್ತು. ಟಿಪ್ಪರ ಲಾರಿ ಒಂದು ಜಮೀನದಲ್ಲಿ ನಿಂತಿತ್ತು ಎಂದರೆ ಸಾಕ್ಷಿಯು ಜಮೀನಿನಲ್ಲಿ ಇರುವ ರಸ್ತೆಯ ಮೇಲೆ ನಿಂತಿತ್ತು ಎಂದು ಹೇಳುತ್ತಾರೆ. ಆ ರೀತಿ ನಾನು ಅಲ್ಲಿ ರಸ್ತೆ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಕೌರಣ್ಣವರ ಎನ್ನುವವರ ಹೊಲದಲ್ಲಿ ಲಾರಿ ನಿಂತ ಜಾಗೆಯ ಸುತ್ತಮುತ್ತ ಯಾವುದೇ ರಸ್ತೆ ಇರಲಿಲ್ಲಾ ಎನ್ನುವುದು ಸರಿಯಲ್ಲಾ. ಸದರೀ ಅಪಘಾತ ಖಾಸಗಿ ಜಾಗೆಯಲ್ಲಿ ಆಗಿದ್ದು ಸಾರ್ವಜನಿಕ ಸ್ಥಳದಲ್ಲಿ ಆಗಿರುವುದಿಲ್ಲಾ ಎನ್ನುವುದು ಸರಿಯಲ್ಲಾ. ಆ ಕಾರಣ 2 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥನಲ್ಲಾ ಎಂದರೆ ಸರಿಯಲ್ಲಾ.

ಅಪಘಾತದ ನಂತರ ನನ್ನನ್ನು ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು

ಹೋದರು. ಸದರೀ ಆಸ್ಪತ್ರೆಯಲ್ಲಿ 2 ತಿಂಗಳ ನಂತರ ಬಿಡುಗಡೆ ಹೊಂದಿರುತ್ತೇನೆ. ಆಗ ನಾನು ಸಂಪೂರ್ಣ ಗುಣ ಆಗಿದ್ದೆ ಎನ್ನುವುದು ಸರಿಯಲ್ಲಾ. ನನಗೆ ಯಾವುದೇ ಅಂಗನ್ಯೂನತೆ ಉಂಟಾಗಿಲ್ಲಾ ಎನ್ನುವುದು ಸರಿಯಲ್ಲಾ. ಈಗಲೂ ಸಹ ನಾನು ಮೊದಲಿನಂತೆ ಕೆಲಸ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲಾ. ನನಗಾದ ಗಾಯಗಳಿಂದಾಗಿ ನನಗೆ ಪೈಪುಗಳನ್ನು ಶಸ್ತ್ರ ಚಿಕಿತ್ಸೆ ಮೂಲಕ ಅಳವಡಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ಅಪಘಾತದ ಸಮಯದಲ್ಲಿ ವಾಹನವನ್ನು ಯುನೂಸ ಎನ್ನುವವ ಓಡಿಸುತ್ತಿದ್ದ. ಸದರೀ ಚಾಲಕನಿಗೆ ಡಿ ಎಲ್ ಮತ್ತು ವಾಹನಕ್ಕೆ ಫಿಟ್ನೆಸ್ ಸರ್ಟಿಫಿಕೇಟ ಇರಲಿಲ್ಲಾ ಎಂದರೆ ಗೊತ್ತಿಲ್ಲಾ. ವಿಮೆ ಕರಾರು ಉಲ್ಲಂಗನೆಯಾದ ಕಾರಣ ಹಾಗೂ ಅಪಘಾತ ಖಾಸಗಿ ಸ್ಥಳದಲ್ಲಿ ಆದ ಕಾರಣ 2 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥನಲ್ಲಾ ಎಂದರೆ ಸರಿಯಲ್ಲಾ. ರೂ. 2 ಲಕ್ಷ ಹಣ ಚಿಕಿತ್ಸೆಗೆ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

**(1 ನೇ ಎದುರುದಾರ ಹಾಗೂ ಅವರ ಪರ ವಕೀಲರು ಗೈರುಹಾಜರು. ಯಾರು ಪ್ರತಿನಿಧಿಸಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ

**ಎಂವಿಸಿ ನಂ. 61/2020**
**ಪಿ. ಡಬ್ಲ್ಯೂ.1**